| ಅಸಲು ದಾವಾದಲ್ಲಿ ರಾಜೀ ಡಿಕ್ರಿಯು | ದಾವಾ ದಾಖಲು ದಿನಾಂಕಃ **23-11-2022** |
|---|---|
| | ದಾವಾ ನಿಖಾಲಿ ದಿನಾಂಕಃ **11-02-2023** |

## ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹಾನಗಲ್

## ಅಸಲು ದಾವಾ ಸಂಖ್ಯೆಃ 288/2022

ವಾದಿ 1) ರಿಯಾಜಅಹ್ಮದ ತಂದೆ ರಾಜಾವಲಿಸಾಬ ತೊಂಡುರ ,
ವಯಾ-53 ವರ್ಷ, ಉದ್ಯೋಗ-ಶೇತ್ಕಿರಿ,
ಸಾ- ವರ್ದಿ, ತಾ-ಹಾನಗಲ್, ಜಿ- ಹಾವೇರಿ.

ವಿರುದ್ಧ

ಪ್ರತಿವಾದಿ 1) ಮೊಹಿದ್ದೀನಸಾಬ @ ಮಹೇದ್ದೀನ ತಂದೆ ಗೌಸುಸಾಬ ತಂಡೂರ ,
ವಯಾ-63 ವರ್ಷ, ಉದ್ಯೋಗ- ಶೇತ್ಕಿರಿ ,
ಸಾ- ವರ್ದಿ, ತಾ-ಹಾನಗಲ್, ಜಿ- ಹಾವೇರಿ

****

**ಆಕಾರಃ**

ಕರ್ನಾಟಕ ನ್ಯಾಯಾಲಯಗಳ ಅಧಿನಿಯಮ ಶುಲ್ಕ ಹಾಗೂ ಮೌಲ್ಯೀಕರಣ ಕಾಯ್ದೆ 1958 ರ ಕಲಂ 40(ಎ) ನೇದ್ದರ ಕೆಳಗೆ 2250-00 ರೂಗಳ ಯೋಗ್ಯ ಕೋರ್ಟ ಫಿ ಭರಾಯಿಸಿದೆ.

**ವಾದಿಯ ವಿನಂತಿಃ**

(ಎ) ಪ್ರಸ್ತುತ ದಾವಾದ ಆಸ್ತಿಯನ್ನು ಪ್ರತಿವಾದಿಯು ವಾದಿಗೆ ಬರೆದುಕೊಟ್ಟ ಖರೀದಿ ಒಪ್ಪಂದ ಸಂಚಗಾರ ಕರಾರು ಪತ್ರದ ಪ್ರಕಾರ ಬಾಕಿ ಉಳಿದ ರೂ. 5,000/- ಗಳನ್ನು ಪಡೆದುಕೊಂಡು ವಾದಿಯ ಹೆಸರಿಗೆ ನೋಂದಾಯಿತ ಖರೀದಿ ಪತ್ರ ಮಾಡಿಕೊಡುವಂತೆ ಆದೇಶ ಮಾಡೋಣವಾಗಬೇಕಾಗಿ ವಿನಂತಿ.

(ಬಿ) ಸದರಿ ದಾವೆಯನ್ನು ಕಾಲಕಾಲಕ್ಕೆ ಮತ್ತು ಸಂದರ್ಭಾನುಸಾರ ತಿದ್ದುಪಡಿ ಮಾಡಲು ವಾದಿಗೆ ಅನುಮತಿ ನೀಡೋಣವಾಗಬೇಕಾಗಿ ವಿನಂತಿ.

ಸಿ) ಯುಕ್ತ ಕಂಡ ಇನ್ನಿತರೆ ನ್ಯಾಯಾಶ್ರಯಗಳನ್ನು ವಾದಿಗೆ ದೊರಕಿಸಿ ಕೊಡಬೇಕಾಗಿ ವಿನಂತಿ.

ಈ ದಾವೆಯು ಈ ಹೊತ್ತು ಕೊನೆಯ ನಿಖಾಲಿಗೆ ಶ್ರೀ. ಜನಾರ್ಧನ ಎಸ್.ಕೆ., ಬಿ.ಎ.ಎಲ್. ಎಲ್.ಎಲ್.ಬಿ. ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹಾನಗಲ್ ಇವರ ಉಪಸ್ಥಿತಿಯಲ್ಲಿ ವಾದಿಯ ಪರ ಶ್ರೀ ಎಸ್. ಬಿ. ಹಳೇಮನಿ ವಕೀಲರು ಹಾಗೂ ಪ್ರತಿವಾದಿಯ ಪರ ಶ್ರೀ ಕೆ.ಬಿ. ಹಳೇಮನಿ ವಕೀಲರು ಹಾಜರಾಗಿದ್ದು ವಾದಿ ಮತ್ತು ಪ್ರತಿವಾದಿ ರಾಜೀ ಅರ್ಜಿ ಸಲ್ಲಿಸಿದ್ದರಿಂದ ರಾಜೀ ಡಿಕ್ರಿ ಮಾಡಿ ಫರ್ಮಾಯಿಸುವುದೇನೆಂದರೆಃ

## ORDER

The compromise petition filed by the plaintiff and defendant U/sec 20(3) of Legal Service Authority Act 1987 is hereby allowed and accepted.

Consequently, suit of the plaintiff is hereby decreed in terms of said joint compromise petition.

Joint Compromise petition filed by the parties form a part of the decree.

Draw decree accordingly.

Sri SBH adv., for plaintiff files a memo for return of court fee. Perused the memo and same is considered.

Office is hereby directed to return entire court fee to the plaintiff on his proper identification.

The terms and conditions of the decree as per compromise are as follows:-

1. ಸದರ ದಾವಾದಲ್ಲಿಯ ವಾದಿ ಮತ್ತು ಪ್ರತಿವಾದಿಯು ಒಂದೇ ಊರಿನವರು ಇರುತ್ತಾರೆ ವಾದಿ ಮತ್ತು ಪ್ರತಿವಾದಿಯು ಒಂದೇ ಊರಿನವರು ಇರುವುದರಿಂದ ಅವರ ಮಧ್ಯ ಸಂಬಂಧವು ಹಾಳಾಗಬಾರದೆನ್ನುವ ಸದುದ್ದೇಶದಿಂದ ಸದರಿಯವರು ತಮ್ಮ ಊರಿನ ಗುರು-ಹಿರಿಯರ ಸಮಕ್ಷಮ ಸದರ ದಾವೆಯನ್ನು ರಾಜಿಯಿಂದ ಇತ್ಯರ್ಥ ಪಡಿಸಿಕೊಳ್ಳಲು ತೀರ್ಮಾನಿಸಿದ್ದು ಅದರ ವಿವರ ಈ ಕೆಳಗಿನಂತೆ ಇರುತ್ತದೆ.

2. ಸದರ ದಾವೆದಲ್ಲಿನ ಪ್ರತಿವಾದಿಯು ದಾವೆದ ಆಸ್ತಿಯನ್ನು ತನ್ನ ಗೃಹಕೃತ್ಯದ ಜರೂರ ಅಡಚಣೆ ಸಲುವಾಗಿ ಹಾಗೂ ಅವಶ್ಯ ಸಾಲ ತೀರಿಸುವ ಸಲುವಾಗಿ ಹಣದ ಜರೂರತೆ ಬಂದ ಕಾರಣ ಪ್ರತಿವಾದಿಯು ಸದರಿ ತನ್ನ ಮಾಲ್ಕಿ ಹಕ್ಕಿನ ದಾವೆದ ಆಸ್ತಿಯನ್ನು ಮಾರಾಟಕ್ಕೆ ಹಚ್ಚಲಾಗಿ ಸದರ ಆಸ್ತಿಯನ್ನು ಒಂದು ಗುಂಟೆಗೆ ರೂ. 20,000/- ದಂತೆ 02 ಗುಂಟೆಗೆ ಖಂಡಮುಕ್ತ ರೂ.40,000/- ಗಳಿಗೆ ವಾದಿಯು ಕೇಳಲಾಗಿ ಪ್ರತಿವಾದಿಯು ದಾವೆದ ಆಸ್ತಿಯನ್ನು ವಾದಿಗೆ ಖರೀದಿಕೊಡಲು ಒಪ್ಪಿಕೊಂಡಿದ್ದು ಇರುತ್ತದೆ ಅನ್ನುವ ವಿಷಯವನ್ನು ಪ್ರತಿವಾದಿ ಒಪ್ಪಿಕೊಳ್ಳುತ್ತಾನೆ.

3. ಸದರ ದಾವೆದ ಆಸ್ತಿಯನ್ನು ವಾದಿ ಮತ್ತು ಪ್ರತಿವಾದಿಯ ಮಧ್ಯ ದಿನಾಂಕಃ 20-09-2022 ರಂದು ಆಗಿರುವ ಖರೀದಿ ಕರಾರು ಒಪ್ಪಂದ ( ಸಂಚಗಾರ ) ಪತ್ರ ಮಾಡಿಕೊಟ್ಟಿರುವುದಾಗಿ ಸದರ ಪ್ರತಿವಾದಿ ಒಪ್ಪುತ್ತಾನೆ. ಹಾಗೂ ಸಂಚಗಾರ ತರೀಖ ರೂ. 35,000/- ಗಳನ್ನು ಪಡೆದಿರುವುದಾಗಿ ಪ್ರತಿವಾದಿ ಒಪ್ಪುತ್ತಾನೆ.

4. ಸದರ ಬಾಕಿ ಉಳಿದ ರೂ. 5,000/- ( ಐದು ಸಾವಿರ) ಗಳನ್ನು ಇಂದು ಪಡೆದುಕೊಂಡಿರುವುದಾಗಿ ಪ್ರತಿವಾದಿ ಒಪ್ಪುತ್ತಾನೆ ಹಾಗೂ ದಾವಾದ ಆಸ್ತಿಯ ಸಂಪೂರ್ಣ ಮಾಲೀಕತ್ವವನ್ನು ಬಿಟ್ಟುಕೊಟ್ಟು ಹಾಗೂ ಸದರ ಆಸ್ತಿ ಕಬ್ಜೆಯನ್ನು ಖರೀದಿ ಪತ್ರ ನೋಂದಾದ ನಂತರ ವಾದಿಗೆ ಬಿಟ್ಟುಕೊಡುವುದಾಗಿ ಸದರ ಪ್ರತಿವಾದಿ ಒಪ್ಪುತ್ತಾನೆ. ಈ ರಾಜಿ ಅರ್ಜಿ ಪ್ರಕಾರ ವಾದಿಗೆ ಬಂದ ಆಸ್ತಿಯ ವಿವರ ಹಾಗೂ ಸದರ ಆಸ್ತಿಯ ಚಕ್ಕಬಂದಿಃ

| ಗ್ರಾಮ | ರಿ.ಸ.ನಂ | ಕ್ಷೇತ್ರ | ಆಕಾರ |
|---|---|---|---|
| | | ಎ-ಗುಂ | ರೂ-ಪೈ |
| ವರ್ದಿ | 91/4 | 00-15 | 01.22 ನೇದ್ದರ |

ಪೈಕಿ ದಕ್ಷಿಣ ದಿಕ್ಕಿನ ಉತ್ತರ ಭಾಗದ 02 ಗುಂಟೆ ಕ್ಷೇತ್ರವಿದ್ದು , ಅದರ ಚಕ್ಕಬಂದಿ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| ಪೂರ್ವಕ್ಕೆ | ಃ | ಇದೇ ರಿ.ಸ.ನಂ ಪೈಕಿ ಮಂಜಪ್ಪ ತಂದೆ ಬಸವಣ್ಣೆಪ್ಪ ಕಳಸದ ಇವರ ಹೆಸರಿಗೆ ಖರೀದಿ ಸಂಚಗಾರ ಪತ್ರ ಬರೆದುಕೊಟ್ಟ ಜಮೀನು. |
| ಪಶ್ಚಿಮಕ್ಕೆ | ಃ | ಪುಟ್ಟಪ್ಪ ತಂದೆ ವೀರಭದ್ರಪ್ಪ ಪವಾಡಿ ಇವರ ಜಮೀನು. |
| ಉತ್ತರಕ್ಕೆ | ಃ | ಪ್ರತಿವಾದಿಯ ಉಳಿದ ಜಮೀನಿನಲ್ಲಿ ಬಿಟ್ಟ 08 ಫೂಟ್ ಸಾಮೂಹಿಕ ದಾರಿ. |
| ದಕ್ಷಿಣಕ್ಕೆ | ಃ | ಮಹ್ಮದಗೌಸ ತಂದೆ ಮೀಯ್ಯಾಸಾಬ ತಂಡೂರ ಇವರ ಜಮೀನು. |

ಈ ಚಕ್ಕಬಂದಿ ಮಧ್ಯದಲ್ಲಿರುವ ಪೂರಾ ಆಸ್ತಿಯನ್ನು ಪ್ರತಿವಾದಿಯು ವಾದಿಗೆ ಬಿಟ್ಟುಕೊಟ್ಟಿರುತ್ತಾನೆ. ಸದರ ರಾಜಿ ಅರ್ಜಿ ಪ್ರಕಾರ ವಾದಿಯು ಇನ್ನು ಮುಂದೆ ದಾವಾದ ಆಸ್ತಿಗೆ ಸಂಪೂರ್ಣ ಮಾಲೀಕನು ಇರುತ್ತಾನೆ ಹಾಗೂ ಇನ್ನು ಮುಂದೆ ಸದರ ದಾವಾದ ಆಸ್ತಿಯನ್ನು ವಾದಿಯು ಖರೀದಿ ಪತ್ರ ನೋಂದಾದ ನಂತರ ಸ್ವ ಇಚ್ಚೆಯಿಂದ ವಹಿವಾಟು ಉಪಭೋಗ ಮಾಡುತ್ತಾ ಹೋಗತಕ್ಕದ್ದು ಅನ್ನುವ ಸಂಗತಿಯನ್ನು ವಾದಿ ಮತ್ತು ಪ್ರತಿವಾದಿ ಒಪ್ಪುತ್ತಾರೆ.

ಪ್ರತಿವಾದಿಯು ಸದರ ಆಸ್ತಿಯನ್ನು ವಾದಿಗೆ 11 ಇ ನಕ್ಷೆ ಮತ್ತು ನೋಂದಣಿ ಅಧಿಕಾರಿಗಳಲ್ಲಿ ಖರೀದಿ ನೋಂದ ಮಾಡಿಕೊಡಲು ತಯ್ಯಾರು ಇರುತ್ತಾನೆ. ಪ್ರತಿವಾದಿಯು ವಾದಿಯು ಕರೆದಾಗ ಬಂದು ನೋಂದಣಿ ಮಾಡಿಸಿಕೊಡಲು ಸಿದ್ದನಿರುತ್ತಾನೆ. ವಾದಿಯು ಮೇಲ್ಕಂಡ ಆಸ್ತಿಗೆ ಸಂಬಂಧಪಟ್ಟ ಕಂದಾಯ ಇಲಾಖೆಗಳಲ್ಲಿ ಹಾಗೂ ಗ್ರಾಮ ಪಂಚಾಯತಿಯಲ್ಲಿ ತನ್ನ ಹೆಸರನ್ನು ಹಚ್ಚಿಸಿಕೊಳ್ಳಲು ಪ್ರತಿವಾದಿ ಒಪ್ಪುತ್ತಾನೆ.

ಈ ಮೇಲ್ಕಾಣಿಸಿದಂತೆ ವಾದಿ ಮತ್ತು ಪ್ರತಿವಾದಿಯ ಮಧ್ಯ ರಾಜಿಯಾಗಿದ್ದು ಸದರ ರಾಜಿಗೆ ವಾದಿ ಪ್ರತಿವಾದಿಯು ಒಬ್ಬರಿಗೊಬ್ಬರು ಯಾರದೂ ಒತ್ತಾಯವಿಲ್ಲದೆ ಸ್ವ ಸಂತೋಷದಿಂದ ಒಪ್ಪಿ ರಾಜಿಯಾಗಿದ್ದು ಇರುತ್ತದೆ.

ಈ ಹೊತ್ತು ದಿನಾಂಕಃ 11 ನೇ ಫೆಬ್ರವರಿ-2023 ರಂದು ನನ್ನ ಸಹಿ ಮತ್ತು ಕೋರ್ಟ ಮೊಹರಿನೊಂದಿಗೆ ಮಾಡಿಕೊಡಲ್ಪಟ್ಟಿತು.

ಡಿಕ್ರಿ ಸಹಿ ದಿನಾಂಕಃ 15-02-2023

ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹಾನಗಲ್ಲ.

## ದಾವಾದ ಖರ್ಚಿನ ಯಾದಿ

| ಕ್ರಮ.ಸಂಖ್ಯೆ | ನ್ಯಾಯಾಲಯದ ಶುಲ್ಕ | ವಾದಿಯರು | ಪ್ರತಿವಾದಿಯರು |
|---|---|---|---|
| 1 | ಅಸಲರ್ಜಿಯ ಮೇಲೆ | 2250-00 | – |
| 2 | ವಕಾಲತ್ ಮೇಲೆ | – | – |
| 3 | ಪ್ರೊಸೆಸ್ ಮೇಲೆ | 08-00 | – |
| 4 | ಮದ್ಯಂತರ ಅರ್ಜಿ ಮೇಲೆ | – | -- |
| 5 | ದಾಖಲೆಗಳ ಮೇಲೆ | – | – |
| 6 | ವಕೀಲರ ಶುಲ್ಕ, ಶುಲ್ಕ ಪ್ರಮಾಣ ಪತ್ರ | (ಸಲ್ಲಿಸಿಲ್ಲ) | (ಸಲ್ಲಿಸಿಲ್ಲ) |
| | ಒಟ್ಟು | 2258-00 | – |

ಡಿಕ್ರಿ ಬರಹಗಾರರು ಶಿರಸ್ತೇದಾರರು ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಹಾನಗಲ್ಲ

## ದಾವಾದಾಸ್ತಿಗಳ ವರ್ಣನೆ

**I) ದಾವಾದ ಆಸ್ತಿಯು ಹಾನಗಲ್ ತಾಲೂಕಾ ಪೈಕಿ ವರ್ದಿ ಗ್ರಾಮದ ಶೇತ್ಕಿರಿ ಜಮೀನು ಇದ್ದು ಅದರ ವಿವರ**

ರಿ.ಸ.ನಂ ಕ್ಷೇತ್ರ ಆಕಾರ

91/4 00-15 01-22 ಇದರ ಪೈಕಿ ದಕ್ಷಿಣ ದಿಕ್ಕಿನ ಉತ್ತರ ಭಾಗದ 02 ಗುಂಟೆ ಜಮೀನು ಮಾತ್ರ ಇದರ ಚಕಬಂದಿಃ

| | | |
|---|---|---|
| ಪೂರ್ವಕ್ಕೆ | : | ಇದೇ ರಿ.ಸ.ನಂ ಪೈಕಿ ಮಂಜಪ್ಪ ತಂದೆ ಬಸವಣ್ಣೆಪ್ಪ ಕಳಸದ ಇವರ ಹೆಸರಿಗೆ ಖರೀದಿ ಸಂಚಗಾರ ಪತ್ರ ಬರೆದುಕೊಟ್ಟ ಜಮೀನು. |
| ಪಶ್ಚಿಮಕ್ಕೆ | : | ಪುಟ್ಟಪ್ಪ ತಂದೆ ವೀರಭದ್ರಪ್ಪ ಪವಾಡಿ ಇವರ ಜಮೀನು. |
| ಉತ್ತರಕ್ಕೆ | : | ಪ್ರತಿವಾದಿಯ ಉಳಿದ ಜಮೀನಿನಲ್ಲಿ ಬಿಟ್ಟ 8 ಫೂಟ ಸಾಮಾಹಿಕ ದಾರಿ. |
| ದಕ್ಷಿಣಕ್ಕೆ | : | ಮಹ್ಮದಗೌಸ ತಂದೆ ಮೀಯ್ಯಾಸಾಬ ತಂಡೂರ ಇವರ ಜಮೀನು. |

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಹಾನಗಲ್ಲ.

1) ವಾದಿಯ ಪರ ಶ್ರೀ ಎಸ್. ಬಿ. ಹಳೇಮನಿ ವಕೀಲರು.

2) ಪ್ರತಿವಾದಿಯ ಪರ ಶ್ರೀ ಕೆ.ಬಿ. ಹಳೇಮನಿ.

****